ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ

ಸಿ ಸಿ ನಂಬರ :198/2021

CW-3 PW-1

ಹೆಸರು : ಮುತ್ತಪ್ಪ ವರದಪ್ಪನವರ
ತಂದೆಯ ಹೆಸರು : ಸಂಗಪ್ಪ
ವಯಸ್ಸು : 40 ವರ್ಷ
ಉದ್ಯೋಗ : ಖಾಸಗಿ ಕೆಲಸ
ವಾಸಸ್ಥಳ : ಗಜೇಂದ್ರಗಡ

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05–11–2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ-1 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸುಮಾರು 8-10 ವರ್ಷಗಳ ಹಿಂದೆ ಗಜೇಂದ್ರಗಡದ 2 ನೇ ನಂಬರ ಶಾಲೆಯಲ್ಲಿ ಬಾಂಡೆ ಸಾಮಾನು, ಬೆಳೆ ಮತ್ತು ಅಡುಗೆ ಸಾಮಾನುಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು, ಆ ಕುರಿತು ಸ್ಥಳ ಪರೀಶಿಲನೆ ಮಾಡಿ ಕಳ್ಳತನ್ನವಾಗಿ ಒಂದು ವಾರದ ನಂತರ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿದ್ದಾರೆ, ಆ ಕಾಲಕ್ಕೆ ನಾನು, ಚಾಸಾ-1 ಮತ್ತು 2 ರವರು ಹಾಜರಿದ್ದೇವು. ಕಳ್ಳತನವಾದ ದಿನ ನಾನು ಸ್ಥಳದಲ್ಲಿ ಇದ್ದೆ. ಸದರಿ ಶಾಲೆಯ ಹತ್ತಿರ ನಮ್ಮ ಮನೆ ಇರುತ್ತದೆ. ನಾನು ಶಾಲೆಯ ಹತ್ತಿರ ಹೋಗುತ್ತಿದ್ದಾಗ ಚಾಸಾ-1 ರವರು ಶಾಲೆಯ ಹತ್ತಿರ ನಿಂತಿದ್ದರು, ನಾನು ಹೋಗಿ ನೋಡಲಾಗಿ ಶಾಲೆಯ ಅಡುಗೆ ಕೋಣೆಯ ಬೀಗ ಮುರಿದು ಬಿದ್ದಿತ್ತು, ಆ ಸಮಯದಲ್ಲಿ ಅಡುಗೆ ತಯಾರು ಮಾಡುವವರು ಸಹ ಸ್ಥಳದಲ್ಲಿಯೇ ಇದ್ದರು. ಚಾಸಾ-1 ರವರು ಪೊಲೀಸರಿಗೆ ಫೋನ ಮಾಡಿದ್ದರಿಂದ ಪೊಲೀಸರು ಸ್ಥಳಕ್ಕೆ ಬಂದಿದ್ದು ನಂತರ ನಾವೇಲ್ಲರು ಕೋಣೆಯ ಒಳಗಡೆ ಹೊದೇವು. ಸದರಿ ಕೋಣೆಯಲ್ಲಿ ಮಕ್ಕಳಿಗೆ ಅಡುಗೆ ತಯಾರಿಸುವ ಸಾಮಾನುಗಳು ಮತ್ತು ಸಾಮಾಗ್ರಿಗಳು ಎಲ್ಲವನ್ನು ಕಳ್ಳತನ ಮಾಡಿದ್ದರು. ಸಾಕ್ಷಿಯು ಒಂದು ಫೋಟೊವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಪೊಲೀಸರು ವರದಿ ಮಾಡಿಕೊಂಡು ನಮ್ಮ ಸಹಿ ಪಡೆದಿರುತ್ತಾರೆ.

**ಪಾಟೀ ಸವಾಲು : ಶ್ರೀ.ಎಸ್.ಬಿ.ಹೆಚ್. 1 ನೇ ಆರೋಪಿಯ ಪರ ವಕೀಲರಿಂದಃ**

ಘಟನೆ ಯಾವಾಗ ಆಯಿತು ಎಂದು ದಿನಾಂಕವನ್ನು ಹೇಳಲು ಬರುವುದಿಲ್ಲ. ಸಾಕ್ಷಿಯು ಬಹಳ ದಿನಗಳಾಗಿದ್ದರಿಂದ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು 7 ನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿದೆನೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಆ ದಿನ ಶಾಲೆಯ ಹತ್ತಿರ ಬಹಿರ್ದೇಸೆಗೆ ಹೋಗುತ್ತಿದ್ದೆ. ಚಾಸಾ–1 ರವರು ಹೇಳಿದ್ದರಿಂದ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆ ಬರೆದ ಪೊಲೀಸರ ಹೆಸರು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ಬಂದ ನಂತರ ನಾವು ಸದರಿ ಕೋಣೆಯಲ್ಲಿ ಹೊಗಿರುತ್ತೇವೆ. ಅಡುಗೆ ಕೋಣೆಯಲ್ಲಿ ಯಾವ ಸಾಮಗ್ರಿಗಳು ಮತ್ತು ಸಾಮಾನುಗಳು ಇದ್ದವು ಎಂದು ನನಗೆ ಮಾಹಿತಿ ಇದೆ. ನಾನು ಎಸ್.ಡಿ.ಎಮ್.ಸಿ. ಯ ಸದಸ್ಯನಲ್ಲ. ಅಲ್ಲಿ ಕಳ್ಳತನ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಅಲ್ಲಿ ಯಾವುದೇ ಘಟನೇ ನಡೆಯದಿದ್ದರು ಚಾಸಾ–1 ರವರ ಮಾತು ಕೇಳಿ ಪಂಚನಾಮೆಗೆ ಸಹಿ ಮಾಡಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ. ಸರಿ ಇದೆ.

SD/–

(ಹುಲುಗಪ್ಪ ಡಿ.)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.